ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

**ಸಂಖ್ಯೆ: DPA/TP/CC/211/2021-22** **ದಿನಾಂಕ:** 04 OCT 2024

## "ಪ್ರಾರಂಭಿಕ ಪ್ರಮಾಣ ಪತ್ರ"

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರನ್ವಯ)**
**(ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳ 1965 ರ ನಿಯಮ 30 ನಮೂನೆ 3 ರನ್ವಯ)**

**ವಿಷಯ:** ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿ, ಅದ್ದೆವಿಶ್ವನಾಥಪುರ ಗ್ರಾಮದ ಸರ್ವೆ ನಂ. 256 (ಹಳೇ ಸ.ನಂ. 69) ರಲ್ಲಿನ 1ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಅನುಮೋದಿಸಲಾಗಿರುವ 'ವಸತಿ' ಉಪಯೋಗದ ಏಕ ನಿವೇಶನ ವಿನ್ಯಾಸದ ಖಾತಾ ಸಂಖ್ಯೆ 4713/256/69 (150200200600324579) ರ 3980.61 ಚ.ಮೀ ಅಳತೆಯ ವಸತಿ ಪ್ರದೇಶದಲ್ಲಿ 'ರೆಸಿಡೆನ್ಸಿಯಲ್ ಅಪಾರ್ಟ್‌ಮೆಂಟ್' ಕಟ್ಟಡ ನಿರ್ಮಿಸಲು ಈಗಾಗಲೇ ಅನುಮೋದಿಸಲಾಗಿರುವ ಕಟ್ಟಡ ನಕ್ಷೆಯಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಅಳವಡಿಸಲಾಗಿರುವುದರಿಂದ, ಪರಿಷ್ಕೃತ ನಕ್ಷೆಯನ್ವಯ ಕಟ್ಟಡ ನಿರ್ಮಿಸಲು ನಕ್ಷೆಗೆ ಅನುಮೋದನೆ/ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ.

**ಉಲ್ಲೇಖ:**

1. ಪ್ರಾಧಿಕಾರದಿಂದ ಶ್ರೀ ಕೆ.ಸುಬ್ರಮಣ್ಯರಾಜು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಥರೈಸ್ಡ್ ಸಿಗ್ನೇಟರಿ, ಮೆ॥ ಪ್ರಸಿದ್ಧಿ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್ (ಶ್ರೀ ಶ್ರೀರಾಮರೆಡ್ಡಿ ಅಲಿಯಾಸ್ ಶ್ರೀರಾಮಯ್ಯ ಬಿನ್ ಲೇಟ್॥ ವೆಂಕಟರಮಣಪ್ಪ, ಶ್ರೀಮತಿ ಜಯಲಕ್ಷ್ಮಮ್ಮ ಕೊಂ ಶ್ರೀರಾಮರೆಡ್ಡಿ, ಅಶ್ವಥಪ್ಪ ಬಿನ್ ಶ್ರೀರಾಮರೆಡ್ಡಿ, ಶ್ರೀಮತಿ ಅಶ್ವಿನಿ ಕೋಂ ಅಶ್ವಥಪ್ಪ, ಶ್ರೀ ರವಿ ಬಿನ್ ಶ್ರೀರಾಮರೆಡ್ಡಿ ಹಾಗೂ ಶ್ರೀಮತಿ ಗೀತಾ ಕೋಂ ರವಿ ರವರುಗಳ ಪರವಾಗಿ ನೋಂದಾಯಿತ ಜಿಪಿಎದಾರರು ಹಾಗೂ ಜಂಟಿ ಅಭಿವೃದ್ಧಿದಾರರು) ರವರಿಗೆ ಅನುಮೋದನೆ ನೀಡಲಾಗಿರುವ ಏಕ ನಿವೇಶನ ವಿನ್ಯಾಸ ನಕ್ಷೆ ದಿ: 03/03/2022.
2. ಶ್ರೀ ಕೆ.ಸುಬ್ರಮಣ್ಯರಾಜು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಥರೈಸ್ಡ್ ಸಿಗ್ನೇಟರಿ, ಮೆ॥ ಪ್ರಸಿದ್ಧಿ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್ (ನೋಂದಾಯಿತ ಜಿಪಿಎದಾರರು ಹಾಗೂ ಜಂಟಿ ಅಭಿವೃದ್ಧಿದಾರರು) ರವರು ಸಲ್ಲಿಸಿರುವ ಮನವಿ ಅರ್ಜಿ ದಿ:19/03/2022.
3. ಈ ಪ್ರಾಧಿಕಾರದ ಸಮ ಸಂಖ್ಯೆಯ ಪ್ರಾರಂಭಿಕ ಪ್ರಮಾಣ ಪತ್ರ ದಿ: 24/06/2022.
4. ಶ್ರೀ ಕೆ.ಸುಬ್ರಮಣ್ಯರಾಜು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಥರೈಸ್ಡ್ ಸಿಗ್ನೇಟರಿ, ಮೆ॥ ಪ್ರಸಿದ್ಧಿ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್ (ನೋಂದಾಯಿತ ಜಿಪಿಎದಾರರು ಹಾಗೂ ಜಂಟಿ ಅಭಿವೃದ್ಧಿದಾರರು) ರವರು ಸಲ್ಲಿಸಿರುವ ಮನವಿ ಅರ್ಜಿ ದಿ:14/05/2024.
5. ಈ ಪ್ರಾಧಿಕಾರದ ಸಮ ಸಂಖ್ಯೆಯ ಶುಲ್ಕ ಪಾವತಿ ಸೂಚನಾ ಪತ್ರ ದಿ: 30/09/2024.
6. ಮೆ॥ ಪ್ರಯುಕ್ತ ಪ್ರಾಪರ್ಟಿಸ್ ಎಲ್‌ಎಲ್‌ಪಿಯ ಅಧಿಕೃತ ಪಾಲುದಾರರಾದ ಶ್ರೀ ಆರ್. ಆನಂದಮೂರ್ತಿ ಹಾಗೂ ಶ್ರೀ ಹರೀಶ್ ಎನ್ ಬಿನ್ ನರಸಪ್ಪ ರವರುಗಳು ಸಲ್ಲಿಸಿರುವ ಮನವಿ ದಿ:03/10/2024.
7. ಅರ್ಜಿದಾರರು ರಶೀದಿ ಸಂಖ್ಯೆ: 2341 ದಿ:04/10/2024, ರಂತೆ ರೂ. 4,100/- (ನಾಲ್ಕು ಸಾವಿರದ ಒಂದು ನೂರು ರೂಪಾಯಿಗಳು ಮಾತ್ರ) ಗಳು ಮಾತ್ರ ಪಾವತಿಸಿರುತ್ತಾರೆ.

*********

ಶ್ರೀ ಕೆ.ಸುಬ್ರಮಣ್ಯರಾಜು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಥರೈಸ್ಡ್ ಸಿಗ್ನೇಟರಿ, ಮೆ॥ ಪ್ರಸಿದ್ಧಿ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್ (ಶ್ರೀ ಶ್ರೀರಾಮರೆಡ್ಡಿ ಅಲಿಯಾಸ್ ಶ್ರೀರಾಮಯ್ಯ ಬಿನ್ ಲೇಟ್॥ ವೆಂಕಟರಮಣಪ್ಪ, ಶ್ರೀಮತಿ ಜಯಲಕ್ಷ್ಮಮ್ಮ ಕೊಂ ಶ್ರೀರಾಮರೆಡ್ಡಿ, ಅಶ್ವಥಪ್ಪ ಬಿನ್ ಶ್ರೀರಾಮರೆಡ್ಡಿ, ಶ್ರೀಮತಿ ಅಶ್ವಿನಿ ಕೋಂ ಅಶ್ವಥಪ್ಪ, ಶ್ರೀ ರವಿ ಬಿನ್ ಶ್ರೀರಾಮರೆಡ್ಡಿ ಹಾಗೂ ಶ್ರೀಮತಿ ಗೀತಾ ಕೋಂ ರವಿ ರವರುಗಳ ಪರವಾಗಿ ನೋಂದಾಯಿತ ಜಿಪಿಎದಾರರು ಹಾಗೂ ಜಂಟಿ ಅಭಿವೃದ್ಧಿದಾರರು) ರವರಿಗೆ ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿ, ಅದ್ದೆವಿಶ್ವನಾಥಪುರ ಗ್ರಾಮದ ಸರ್ವೆ ನಂ. 256 (ಹಳೇ ಸ.ನಂ. 69) ರಲ್ಲಿನ 1ಎಕರೆ ವಿಸ್ತೀರ್ಣದ ಪ್ರದೇಶಕ್ಕೆ ದಿನಾಂಕ:19/01/2022 ರಂದು ನಡೆದ ಪ್ರಾಧಿಕಾರದ 13ನೇ ಸಭೆಯ ವಿಷಯ ಸಂಖ್ಯೆ: 13.19 ರ ತೀರ್ಮಾನ -ದಂತೆ ಉಲ್ಲೇಖ (1) ರಲ್ಲಿನ ಅನುಮೋದಿತ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಯ ಖಾತಾ ಸಂಖ್ಯೆ 4713/256/69

.....2



E-mail :dpa.dbpura2018@gmail.com Website : www.doddaballapur.tpa.gov.in

(150200200600324579) ರ ಪ್ರದೇಶದಲ್ಲಿ 'ರೆಸಿಡೆನ್ಸಿಯಲ್ ಅಪಾರ್ಟ್‌ಮೆಂಟ್' ಕಟ್ಟಡ ಕಟ್ಟಲು ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿ ಉಲ್ಲೇಖ (2) ರಂತೆ ಅರ್ಜಿ ಸಲ್ಲಿಸಿರುತ್ತಾರೆ. ಈ ಸಂಬಂಧ ಉಲ್ಲೇಖ (3) ರಲ್ಲಿ ಕಟ್ಟಡ ನಕ್ಷೆಗೆ ಅನುಮೋದನೆ/ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿರುತ್ತದೆ.

ಉಲ್ಲೇಖ (4) ರನ್ವಯ ಶ್ರೀ ಕೆ.ಸುಬ್ರಮಣ್ಯರಾಜು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಥರೈಸ್ಡ್ ಸಿಗ್ನೇಟರಿ, ಮೆ॥ ಪ್ರಸಿದ್ಧಿ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್ ರವರು ಪ್ರಶ್ನಿತ ಪ್ರದೇಶಕ್ಕೆ ಈಗಾಗಲೇ ಅನುಮೋದಿಸಲಾಗಿರುವ ಕಟ್ಟಡ ನಕ್ಷೆಯಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಅಳವಡಿಸಲಾಗಿರುವುದರಿಂದ, ಪರಿಷ್ಕೃತ ನಕ್ಷೆಯನ್ವಯ ಕಟ್ಟಡ ನಿರ್ಮಿಸಲು ಕಟ್ಟಡ ನಕ್ಷೆಗೆ ಅನುಮೋದನೆ/ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 234 ಬಿಎಂಆರ್ 2023 (ಇ) ದಿನಾಂಕ: 20.11.2023 ರ ಆದೇಶದಂತೆ, ದಿನಾಂಕ: 23.01.2024 ರಂದು ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಮತ್ತು ಜಲ ಸಂಪನ್ಮೂಲ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದ ಸಭೆಯ ನಡಾವಳಿಯ ಅನುಸಾರ ದಿನಾಂಕ: 24-09-2024 ರಂದು ವಸತಿ ಉದ್ದೇಶದ ಪರಿಷ್ಕೃತ ಕಟ್ಟಡ ನಿರ್ಮಿಸಲು ನಕ್ಷೆಗೆ ಅನುಮೋದನೆ ಹಾಗೂ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರ ಪೂರ್ವಸಮ್ಮತಿ ಪಡೆಯಲಾಗಿರುತ್ತದೆ. ಉಲ್ಲೇಖ (5) ರ ಈ ಪ್ರಾಧಿಕಾರದ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ಅಗತ್ಯ ಶುಲ್ಕಗಳನ್ನು 90 ದಿನಗಳೊಳಗಾಗಿ ಪಾವತಿಸಲು ಹಾಗೂ ವಲಯನಿಯಮಾವಳಿಗಳಿಗೆ ಅನುಗುಣವಾಗಿ ತಯಾರಿಸಿದ ಉದ್ದೇಶಿತ ಪರಿಷ್ಕೃತ ಕಟ್ಟಡದ ನಕ್ಷೆಯ ನೀಲಿ ಪ್ರತಿಗಳನ್ನು ಅರ್ಜಿದಾರರು/ಅಭಿಯಂತರರ ಸಹಿಗಳೊಂದಿಗೆ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಪ್ರಸ್ತಾಪಿತ ಪ್ರದೇಶಕ್ಕೆ ಈ ಹಿಂದೆ ಶ್ರೀ ಕೆ.ಸುಬ್ರಮಣ್ಯರಾಜು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಥರೈಸ್ಡ್ ಸಿಗ್ನೇಟರಿ, ಮೆ॥ ಪ್ರಸಿದ್ಧಿ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ನೀಡಲಾಗಿದ್ದ ಜನರಲ್ ಪವರ್ ಆಫ್ ಅಟಾರ್ನಿ ಮತ್ತು ಜಂಟಿ ಅಭಿವೃದ್ಧಿ ಕರಾರುಗಳು ಉಪನೋಂದಣಾಧಿಕಾರಿಗಳು, ಬ್ಯಾಟರಾಯನಪುರ ರವರ ಕಛೇರಿಯ 4ನೇ ಪುಸ್ತಕದ ದಸ್ತಾವೇಜು ಸಂಖ್ಯೆ: BYP-4-00306-2024-25 ದಿನಾಂಕ: 15/07/2024 ರನ್ವಯ ನೋಂದಾಯಿಸಲಾಗಿರುವ Cancellation of General Power Of Attorney ಮತ್ತು 1ನೇ ಪುಸ್ತಕದ ದಸ್ತಾವೇಜು ಸಂಖ್ಯೆ: BYP-1-05289-2024-25 ದಿನಾಂಕ: 15/07/2024 ರನ್ವಯ ನೋಂದಾಯಿಸಲಾಗಿರುವ Agreement of Termination/Cancellation of JDA ರನ್ವಯ ರದ್ದುಗೊಳಿಸಿ, ಮೆ॥ ಪ್ರಯುಕ್ತ ಪ್ರಾಪರ್ಟಿಸ್ ಎಲ್‌ಎಲ್‌ಪಿಯ ಅಧಿಕೃತ ಪಾಲುದಾರರಾದ ಶ್ರೀ ಆರ್. ಆನಂದಮೂರ್ತಿ ಹಾಗೂ ಶ್ರೀ ಹರೀಶ್ ಎನ್ ಬಿನ್ ನರಸಪ್ಪ ರವರಿಗೆ ಉಪನೋಂದಣಾಧಿಕಾರಿಗಳು, ಬ್ಯಾಟರಾಯನಪುರ ರವರ ಕಛೇರಿಯ 4ನೇ ಪುಸ್ತಕದ ದಸ್ತಾವೇಜು ಸಂಖ್ಯೆ: BYP-4-00307-2024-25 ದಿನಾಂಕ: 15/07/2024 ರನ್ವಯ General Power of Attorney ಮತ್ತು 1ನೇ ಪುಸ್ತಕದ ದಸ್ತಾವೇಜು ಸಂಖ್ಯೆ: BYP-1-05291-2024-25 ದಿನಾಂಕ: 15/07/2024 ರನ್ವಯ Joint Development Agreement ನೋಂದಾಯಿಸಲಾಗಿದ್ದು, ಮೆ॥ ಪ್ರಯುಕ್ತ ಪ್ರಾಪರ್ಟಿಸ್ ಎಲ್‌ಎಲ್‌ಪಿಯ ಅಧಿಕೃತ ಪಾಲುದಾರರಾದ ಶ್ರೀ ಆರ್. ಆನಂದಮೂರ್ತಿ ಹಾಗೂ ಶ್ರೀ ಹರೀಶ್ ಎನ್ ಬಿನ್ ನರಸಪ್ಪ ರವರ ಹೆಸರಿನಲ್ಲಿ ಇನ್ನು ಮುಂದೆ ಪತ್ರ ವ್ಯವಹಾರ ಮತ್ತು ನಕ್ಷೆಯ ಅನುಮೋದನೆ ನೀಡಬೇಕೆಂದು ಉಲ್ಲೇಖ (6) ರ ಮನವಿ ಪತ್ರದಲ್ಲಿ ಮನವಿ ಸಲ್ಲಿಸಿರುತ್ತಾರೆ.

ಉಲ್ಲೇಖ (7) ರಂತೆ ಪರಿಷ್ಕೃತ ಕಟ್ಟಡ ನಕ್ಷೆ ಅನುಮೋದನೆ ಸಂಬಂಧ ಶುಲ್ಕಗಳನ್ನು ಪಾವತಿಸುತ್ತಾ, ಪರಿಷ್ಕೃತ ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಗಿನ ನಿಬಂಧನೆಗಳೊಂದಿಗೆ ನೀಡಲಾಗಿದೆ.

## ನಿಬಂಧನೆಗಳು

1. ಈ ಪ್ರಾಧಿಕಾರದ ವಸತಿ ಉಪಯೋಗದ ಏಕ ನಿವೇಶನ ವಿನ್ಯಾಸ ಅನುಮೋದನೆ ಆದೇಶ ಪತ್ರ ಸಂಖ್ಯೆ: DPA/TP/SF-LAO/10/2020-21/1037 ದಿನಾಂಕ: 03-03-2022 ರ ಆದೇಶದಲ್ಲಿ ವಿಧಿಸಲಾಗಿರುವ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

......3

ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.



2. ಈ ಹಿಂದೆ ಪ್ರಸ್ತಾಪಿತ ಪ್ರದೇಶಕ್ಕೆ ಅನುಮೋದಿಸಲಾಗಿರುವ ಕಟ್ಟಡ ನಕ್ಷೆ ಅನುಮೋದನೆ ಆದೇಶ ಪತ್ರ ಸಂಖ್ಯೆ: DPA/TP/CC/211/2021-22/357 ದಿನಾಂಕ: 24-06-2022 ಅನ್ನು ರದ್ದುಗೊಳಿಸಲಾಗಿದೆ.
3. ಅನುಮೋದಿತ ಪರಿಷ್ಕೃತ ಕಟ್ಟಡ ನಕ್ಷೆಯಂತೆ ನಡುಜಾಗವನ್ನು ಬಿಟ್ಟು ಕಟ್ಟಡ ಕಟ್ಟತಕ್ಕದ್ದು ಹಾಗೂ ಯೋಜಿಸಿರುವ ಕಟ್ಟಡವನ್ನು ವಸತಿ ಉದ್ದೇಶಕ್ಕಾಗಿಯೇ ಉಪಯೋಗಿಸತಕ್ಕದ್ದು.
4. ಪ್ರಸ್ತಾಪಿತ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರ ಮಂಡಳಿಯವರಿಂದ ಪಡೆದಿರುವ Consent Order No.CTE-331189 Dated: 10-05-2022 (Valid up to 09-04-2027) ಪತ್ರದಲ್ಲಿನ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
5. ಪ್ರಸ್ತಾಪಿತ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು (ವಿ), ಹೆಬ್ಬಾಳ ಡಿವಿಷನ್, ಬೆಸ್ಕಾಂ, ಯಲಹಂಕ ಬೆಂಗಳೂರು ರವರ ಪತ್ರ ಸಂಖ್ಯೆ: EE-HD/AEE (O)/AE-1/22-23/814 ದಿನಾಂಕ: 30-05-2022 ರ ಪತ್ರದಲ್ಲಿನ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
6. ಈ ಪ್ರಾರಂಭಿಕ ಪ್ರಮಾಣ ಪತ್ರವನ್ನು ಎರಡು ವರ್ಷದ ಅವಧಿಗೆ ಅಂದರೆ ದಿನಾಂಕ: **04-10-2024** ರಿಂದ **03-10-2026** ರವರೆಗೆ ಮಾತ್ರ ನೀಡಲಾಗಿರುತ್ತದೆ.
7. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಪ್ರಕಾರ ಇದು ಪ್ರಾರಂಭಿಕ ಪ್ರಮಾಣ ಪತ್ರವಾಗಿದ್ದು, ಈ ಪತ್ರದ ಅಧಾರದ ಮೇಲೆ ಅವಶ್ಯಕ ಇತರೆ ಪರವಾನಿಗೆಯನ್ನು ರಾಜಾನುಕುಂಟೆ ಗ್ರಾಮ ಪಂಚಾಯ್ತಿ ರವರಿಂದ ಪಡೆದ ನಂತರ ಅಭಿವೃದ್ಧಿ ಕಾರ್ಯ ಕೈಗೊಳ್ಳತಕ್ಕದ್ದು.
8. ಕಾಲುವೆ/ಕೆರೆ/ಇತ್ಯಾದಿ.... ಬಫರ್‌ಗೆ ಒಳಪಡುವ ಪ್ರದೇಶಕ್ಕೆ ನಿಯಮಾನುಸಾರ ಬಫರ್ ಬಿಡುವ ಷರತ್ತಿಗೊಳಪಟ್ಟಿರುತ್ತದೆ.
9. ಪ್ರಸ್ತಾಪಿತ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯಲ್ಲಿ ಕಾಯ್ದಿರಿಸಲಾದ ಸರ್ಕಾರಿ ಖರಾಬು ಜಾಗಗಳನ್ನು ಯಥಾರೀತಿಯಾಗಿ ನೆಲದ ಮೇಲೆ ಕಾಯ್ದಿರಿಸಿ ಒತ್ತುವರಿಯಾಗದಂತೆ ಕಾಪಾಡತಕ್ಕದ್ದು.
10. ಅರ್ಜಿದಾರರು ಸರ್ಕಾರದ ಖರಾಬು ಬಗ್ಗೆ ತಪ್ಪು ಮಾಹಿತಿ ನೀಡಿ, ಅನುಮೋದನೆ ಪಡೆದಿದ್ದಲ್ಲಿ ಪ್ರಾಧಿಕಾರದಿಂದ ನೀಡಿರುವ ಅನುಮೋದನೆಯು ತಂತಾನೆ ರದ್ದಾಗುತ್ತದೆ.
11. ಪರಿಷ್ಕೃತ ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿ ಹಾಗೂ ಕಟ್ಟಡದ ವಿಧಿಯ ಪ್ರಕಾರ ಕಟ್ಟಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಪ್ರಾರಂಭಿಕ ಪ್ರಮಾಣ ಪತ್ರದ ಮೂಲಕ ಅನುಮೋದಿಸಿರುವ ಪರಿಷ್ಕೃತ ನಕ್ಷೆಯಂತೆಯೇ ಕೈಗೊಳ್ಳಬೇಕು. ಈ ಕಛೇರಿಯ ಪೂರ್ವಾನುಮತಿ ಪಡೆಯದೇ ಯಾವುದೇ ಬದಲಾವಣೆಯನ್ನು ಮಾಡತಕ್ಕದ್ದಲ್ಲ.
12. ಪರಿಷ್ಕೃತ ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.
13. ಪರಿಷ್ಕೃತ ಕಟ್ಟಡ ಭದ್ರತೆಯ ಕುರಿತು ನುರಿತ (Structural Engineer) ತಜ್ಞರಿಂದ Structural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.
14. ಕಾಮಗಾರಿಗಳಿಂದಾಗಿ ಪರಿಸರವು ಮಾಲಿನ್ಯವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಸ್ವಾಭಾವಿಕ ಮಳೆಯ ನೀರು ಇಂಗಿ ಹೋಗಲು ವ್ಯವಸ್ಥೆ (Rainwater harvesting) ಯನ್ನು ಮಾಡತಕ್ಕದ್ದು ಮತ್ತು ಸೌರಶಕ್ತಿ ವ್ಯವಸ್ಥೆಯನ್ನು ಕಟ್ಟಡದಲ್ಲಿ ಒದಗಿಸತಕ್ಕದ್ದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ನಿವೇಶನದ ಮುಂಭಾಗದಲ್ಲಿ ಹಾಗೂ ಉದ್ಯಾನವನದಲ್ಲಿ ಗಿಡ/ಮರಗಳನ್ನು ಬೆಳೆಸತಕ್ಕದ್ದು.
15. ಈ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.

.....4



E-mail :dpa.dbpura2018@gmail.com

Website : www.doddaballapur.tpa.gov.in

16. ಈ ಪ್ರಾರಂಭಿಕ ಪ್ರಮಾಣ ಪತ್ರದೊಡನೆ ಅನುಮೋದಿಸಲ್ಪಟ್ಟಿರುವ ಪರಿಷ್ಕೃತ ನಕ್ಷೆಯು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು ಹಾಗೂ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದು.
17. ಈ ಪ್ರಾಧಿಕಾರದ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಸಂಪರ್ಕ ರಸ್ತೆಯ ಬಗ್ಗೆ ಯಾವುದೇ ತಕರಾರು ಬಂದರೂ ಈ ಪ್ರಾಧಿಕಾರವು ಹೊಣೆಯಲ್ಲ ಮತ್ತು ನೀವೇ ಸ್ವಂತ ಜವಾಬ್ದಾರಿಯಿಂದ ಬಗೆಹರಿಸಿಕೊಳ್ಳತಕ್ಕದ್ದು.
18. ಈ ಅನುಮತಿಯನ್ನು ಉಲ್ಲಂಘಿಸಿ ಅಭಿವೃದ್ಧಿಯನ್ನು ಕೈಗೊಂಡರೆ ಅಥವಾ ನೀಡಿರುವ ಮಾಹಿತಿಗಳು ದೋಷಪೂರ್ಣವಾಗಿದ್ದರೆ ಅನುಮತಿಯನ್ನು ಹಿಂತೆಗೆದುಕೊಳ್ಳಲಾಗುವುದಲ್ಲದೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು.
19. ಇತರೆ ಇಲಾಖೆಗಳಿಂದ ಅಗತ್ಯವಿರುವ ಅನುಮತಿ/ನಿರಾಕ್ಷೇಪಣಾ ಪತ್ರಗಳನ್ನು ಸಹ ಪಡೆಯತಕ್ಕದ್ದು.
20. ಅರ್ಜಿದಾರರು ಸಲ್ಲಿಸಿರುವ ಮಾಹಿತಿ/ದಾಖಲಾತಿಗಳು ಸುಳ್ಳು ಅಥವಾ ಫೋರ್ಜರಿಗಳಾಗಿದ್ದರೆ ಈ ಕಛೇರಿಯಿಂದ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರವು ತಂಶಾನೆ ರದ್ದಾಗುತ್ತದೆ.

Aeeshi C. 04/10/24

**ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
**ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,**
**ದೊಡ್ಡಬಳ್ಳಾಪುರ.**

**ಇವರಿಗೆ:**

**ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು**
ರಾಜಾನುಕುಂಟೆ ಗ್ರಾಮ ಪಂಚಾಯಿತಿ,
ಯಲಹಂಕ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ.

} ಕಟ್ಟಡ ನಕ್ಷೆಯ 4 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.

**ಪ್ರತಿಯನ್ನು:**

1. ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ. 1/14, 2 ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ ಕಾಂಪೌಂಡ್, 3ನೇ ಕ್ರಾಸ್ ಮಿಷನ್ ರಸ್ತೆ, ಬೆಂಗಳೂರು-560027 ಇವರ ಮಾಹಿತಿಗಾಗಿ ಕಳುಹಿಸಿದೆ.
2. ಮೆ॥ ಪ್ರಯುಕ್ತ ಪ್ರಾಪರ್ಟಿಸ್ ಎಲ್‌ಎಲ್‌ಪಿಯ ಅಧಿಕೃತ ಪಾಲುದಾರರಾದ ಶ್ರೀ ಆರ್. ಆನಂದಮೂರ್ತಿ ಹಾಗೂ ಶ್ರೀ ಹರೀಶ್ ಎನ್ ಬಿನ್ ನರಸಪ್ಪ (ಶ್ರೀ ಶ್ರೀರಾಮರೆಡ್ಡಿ ಅಲಿಯಾಸ್ ಶ್ರೀರಾಮಯ್ಯ ಬಿನ್ ಲೇಟ್॥ ವೆಂಕಟರಮಣಪ್ಪ, ಶ್ರೀಮತಿ ಜಯಲಕ್ಷ್ಮಮ್ಮ ಕೋಂ ಶ್ರೀರಾಮರೆಡ್ಡಿ, ಅಶ್ವಥಪ್ಪ ಬಿನ್ ಶ್ರೀರಾಮರೆಡ್ಡಿ, ಶ್ರೀಮತಿ ಅಶ್ವಿನಿ ಕೋಂ ಅಶ್ವಥಪ್ಪ, ಶ್ರೀ ರವಿ ಬಿನ್ ಶ್ರೀರಾಮರೆಡ್ಡಿ ಹಾಗೂ ಶ್ರೀಮತಿ ಗೀತಾ ಕೋಂ ರವಿ ರವರುಗಳ ಪರವಾಗಿ ನೋಂದಾಯಿತ ಜಿಪಿಎದಾರರು ಹಾಗೂ ಜಂಟಿ ಅಭಿವೃದ್ಧಿದಾರರು), ನಂ. 71, ತಿರುಮಲ ಕಾಂಪ್ಲೆಕ್ಸ್, 1ನೇ ಮಹಡಿ, ದೊಡ್ಡಬಳ್ಳಾಪುರ ಮುಖ್ಯ ರಸ್ತೆ, ರಾಜಾನುಕುಂಟೆ, ಬೆಂಗಳೂರು – 560064
3. ಕಛೇರಿ ಪ್ರತಿ.

Housiey.com